## ವಿಳಾಸ ಬರೆಯಿರಿ

ರಸ್ತೆಯಲ್ಲಿ ಹೊರಟಿದ್ದ ಗುಂಡ ಗೋಡೆಯ ಮೇಲೆ ಬರೆದಿದ್ದ ಬರಹವನ್ನು ಓದಿದ. ಅದರ ಮೇಲೆ, 'ಇಲ್ಲಿ ಯಾರೂ ಕಸ ಹಾಕಬಾರದು. ಕಸ ಹಾಕಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಬರೆದಿತ್ತು. ಒಂದು ಕ್ಷಣ ಅಲ್ಲೇ ನಿಂತು ಯೋಚಿಸಿದ ಗುಂಡ, ಅದರ ಕೆಳಗೆ ಸೀಮೆ ಸುಣ್ಣದಲ್ಲಿ ಹೀಗೆ ಬರೆದ, 'ಇಲ್ಲಿ ಕಸ ಹಾಕುವವರು ದಯವಿಟ್ಟು ತಮ್ಮ ವಿಳಾಸ, ಮೊಬೈಲ್ ಸಂಖ್ಯೆಯನ್ನು ಬರೆಯಬೇಕಾಗಿ ವಿನಂತಿ'.

**ಗೊಲ್ಲಹಳ್ಳಿ ರಾಘು**



## ಸ್ಲಿಮ್ ಅಂಡ್ ಫಿಟ್



ಕನ್ನಡಿಯೊಳಗೆ ತನ್ನನ್ನೇ ತಾನು ನೋಡುತ್ತ ರಮಣಿ ತನ್ನ ಗಂಡ ಪರಮೇಶಿಗೆ ಕೇಳಿದಳು, 'ಏನ್ರಿ, ನಾನು ಬಹಳ ದಪ್ಪ ಆಗಿಲ್ಲ ತಾನೆ?' ಎಂದು. ಬೆಳಗ್ಗೆ ಬೆಳಗ್ಗೆನೇ ಜಗಳ ಯಾಕೆ ಎಂದುಕೊಂಡ ಪರಮೇಶಿ, 'ಛೇ ಛೇ... ಹಾಗೇನಿಲ್ಲ, ಮೊದಲಿನ ಹಾಗೆಯೇ ಸ್ಲಿಮ್ ಅಂಡ್ ಫಿಟ್ ಆಗಿದ್ದೀಯ...' ಎಂದ. ಹೆಂಡತಿ ಖುಷಿಯಿಂದ, 'ಹಾಗಾದ್ರೆ ನನ್ನನ್ನ ಎತ್ತಿಕೊಂಡು ಹೋಗಿ ನಡಿರಿ ಮತ್ತೆ ಫ್ರಿಡ್ಜ್‌ನಿಂದ ಐಸ್‌ಕ್ರೀಂ ತೆಗೆದು ತಿನ್ನಿಸಿ' ಎಂದಳು. ಗಂಡ ಗಾಬರಿಯಿಂದ, 'ನೀನ್ಯಾಕೆ ಕಷ್ಟ ಪಡ್ತೀಯ, ಫ್ರಿಡ್ಜನ್ನೇ ಇಲ್ಲಿ ತಂದಿಡ್ತೀನಿ ಇರು' ಎಂದ.

**ವಿ. ಹೇಮಂತ ಕುಮಾರ್**